ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Karnatak University, Dharwad.
ಪರೀಕ್ಷಾ ವಿಭಾಗ
Examination Section

ಗೌಪ್ಯ ವಿಭಾಗ
Confidential Branch

ಫೋನ ನಂ. 0836–2215259
ಫ್ಯಾಕ್ಸ ನಂ. 0836–2741928

ನಂ. ಕವಿವಿ/ಪರೀಕ್ಷಾ(ಗೌಪ್ಯ)/2022/ 206

ದಿನಾಂಕ: 16.12.2022

## ಸುತ್ತೋಲೆ

**ವಿಷಯ:** UUCMS ತಂತ್ರಾಂಶದಲ್ಲಿ ಎಲ್ಲ ಪ್ರಾಧ್ಯಾಪಕರಿಗೆ Login ID ಯನ್ನು ಕಡ್ಡಾಯವಾಗಿ ಪೂರೈಸುವ ಕುರಿತು.

–@–

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಆಡಳಿತಾಧಿಕಾರಿಗಳು/ನಿರ್ದೇಶಕರು/ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ–2020 (NEP) ರ ಅಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಸ್ನಾತಕೋತ್ತರ 2 ನೇ ಸೆಮೆಸ್ಟರ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆ ಪ್ರಾರಂಭಗೊಳಿಸಲು UUCMS ತಂತ್ರಾಂಶದಲ್ಲಿ ತಮ್ಮ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಖಾಯಂ ಹಾಗೂ ಅತಿಥಿ ಉಪನ್ಯಾಸಕರಿಗೆ UUCMS Login ID ನೀಡುವುದು ಕಡ್ಡಾಯವಾಗಿರುತ್ತದೆ. ಆದರೆ ಕೆಲವೊಂದು ವಿಭಾಗಗಳಲ್ಲಿ ಎಲ್ಲ ಪ್ರಾಧ್ಯಾಪಕರಿಗೆ ಇಲ್ಲಿಯವರೆಗೂ UUCMS Login ID ಪೂರೈಸದಿರುವುದು ಮೇಲಾಧಿಕಾರಿಗಳ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ ಪ್ರತಿ ಪ್ರಾಧ್ಯಾಪಕರು UUCMS Login ID ಮುಖಾಂತರ Login ಆಗಿ ಮೌಲ್ಯಮಾಪನ ಮಾಡುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಪ್ರಾಧ್ಯಾಪಕರು ಮೌಲ್ಯಮಾಪನ ಕಾರ್ಯಕ್ಕೆ Login ID ಯೊಂದಿಗೆ ಹಾಜರಾಗುವುದು.ಒಂದು ವೇಳೆ Login ID ಇಲ್ಲದೇ ಬಂದರೆ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಲು ಸಾಧ್ಯವಾಗುವುದಿಲ್ಲ. ತಮ್ಮ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ಪ್ರಾಧ್ಯಾಪಕರಿಗೆ ದಿನಾಂಕ: 20.12.2022ರೊಳಗಾಗಿ Login ID ನೀಡಲು ಈ ಮೂಲಕ ತಿಳಿಸಲಾಗಿದೆ.

I/C [signature] 16.12.22
ಕುಲಸಚಿವರು (ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಆಡಳಿತಾಧಿಕಾರಿಗಳು/ ನಿರ್ದೇಶಕರು/ಪ್ರಾಚಾರ್ಯರು.

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :

1. ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.
2. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.
4. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.